# ಮೋಹಕುಂಚಿತ ಮಾಯೆ

■ ಕೆ.ಟಿ. ಗಟ್ಟಿ



## ನರಹರಿ, ಅಭಿಗೆ ಲಾಯರ್ ಪಶುಪತಿ ಅಭಯ!

ಬೆಂಗಳೂರಿಗೆ ಬರುವ ದಾರಿಯಲ್ಲಿ ಅಭಿ ಅಪ್ಪನಿಗೆ ಒಂದು ಸೂಚನೆ ನೀಡಿದ್ದ, ‘ಒಬ್ಬ ಡಾಕ್ಟರ್ ಬಳಿ ಹೇಗೆ ಯಾವುದನ್ನೂ ಮುಚ್ಚಿಡದೆ ಕಾಯಿಲೆಯ ವಿವರವನ್ನು ಹೇಳಬೇಕಾಗುತ್ತದೊ ಅದೇ ರೀತಿ, ನೀನು ಲಾಯರ ಬಳಿ ಎಲ್ಲವನ್ನೂ ಹೇಳಬೇಕು. ಸನ್ಮತಿ ಮತ್ತು ಅಮರೇಶ ನಿನ್ನಿಂದ ತಾವು ಬರೆದು ತಂದ ಕಾಗದಕ್ಕೆ ಸಹಿ ಮಾಡಿಸಿದ ಬಗ್ಗೆ, ವಿಷ ತಂದು ನಿನ್ನ ಮುಂದೆ ಇಟ್ಟು ಸಹಿ ಮಾಡದಿದ್ದರೆ ಕುಡಿಸುತ್ತೇನೆ ಎಂದು ಅಮರೇಶ ನಿನ್ನನ್ನು ಹೆದರಿಸಿ ಕುಡಿಸಲು ಸಿದ್ಧನಾದ ಬಗ್ಗೆ, ಮಾನಸಿಕವಾಗಿ ತೀರಾ ದುರ್ಬಲ ಸ್ಥಿತಿಯಲ್ಲಿದ್ದ ಸನ್ಮತಿ ನಿನ್ನನ್ನು ಹೇಗೆ ತನಗೆ ಬೇಕಾದಂತೆ ಉಪಯೋಗಿಸಿಕೊಂಡಳು ಎಂಬ ಬಗ್ಗೆ, ನಿನ್ನಿಂದ ಘಟಿಸಿದ ತಪ್ಪಿನ ಬಗ್ಗೆ, ಅಮರೇಶ ಮತ್ತು ಸನ್ಮತಿ ಮನೆಗೆ ಬೀಗ ಹಾಕಿ ಹೋಗಿರುವ ಬಗ್ಗೆ ಎಲ್ಲವನ್ನೂ